For Private Circulation only

The Weekly Bulletin of the Rotary Club of Surathkal

Rotary District 3181

Charter No. 27539

# E-SUHRITH

ROTARY OPENS OPPORTUNITIES

SURATHKAL ROTARY

16th November 2020 VOL: 13 ISSUE: 20

www.rcsurathkal.org

## May Deepavali and Balipadyami bring Light and Happiness in our Lives

The Header

**Dear fellow Rotarians,**

Rotary Club of Surathkal wishes all its member Happy Deepavali. It is very sorry state of affair that we are not able to celebrate our festivals as we did in the past years. Due to COVID- 19 pandemic our moments of social gatherings are very much restricted. In spite of all the draw backs we could celebrate Karnataka Rajyothsava.

When we join Rotary, we are informed about our responsibility to perform certain duties i.e. paying our dues, attending meetings, participating in club events and projects, contributing to the club service funds etc. Of all the obligations a person accepts when joining a Rotary club the one in which most Rotarians fail is "sharing Rotary." The policies of Rotary International clearly affirm that every individual Rotarian has an "obligation to share Rotary with others and to help extend Rotary through proposing qualified persons for Rotary club membership." It is estimated that less than 30 percent of the members of most Rotary clubs have ever made the effort to propose a new member. Thus, in every club, there are many Rotarians who readily accept the pleasures of being a Rotarian without ever sharing that privilege with another qualified individual. I feel it is time we Rotarians have to keep the Rotary Wheel moving in right direction for which we have to share our Rotary experience with our community so that more and more people in our locality join Rotary fold.



Rotary has a big enough heart. If we open our door wider, we will be able to offer different styles, cultures and opportunities.

Yours in Rotary
**P Raghavendra**, President

**We celebrate the birthday of ...**

**Rtn. Shridhara Bhat** (no snap) on **16th**, of **November**

**and the Wedding Anniversaries of ...**

**Bharathi—Harikrishna Pejathaya** on **13th**, **Poornima I - Krishnaraja Tantri** on **25th** and **Vasanthil - Ramesh Rao** on **26th** of **November**



**E SUHRITH Conveys our Special Greetings to them on these special occasions.**

...Editor's Eyrie....



**Of the things we think, say or do**

**1. Is it the truth ?**

**2. Is it fair to all concerned ? 3. Will it build goodwill and better friendships ? 4. Will it be beneficial to all concerned ?**

the 4 Way Test

Editor **Rtn. Dr. Harikrishnan S Rao** 9740556156

www.rcsurathkal.org email: esuhrithbulletin@gmail.com

Facebook Connect: SuhrithRotarySurathkal

Click HERE for viewing all the back issues of E SUHRITH

## The week that was..



On **10 Nov. Dr Rajmohan, Prof. Krishnamoorthi, Mr Sathish Sadanand** and **Mr Omprakash**. visited the colony once known as Weavers colony at Tadambail, Surathkal. Poor earnings, competition from cheap cloth made by powerlooms, fragmentation of family and the consequent reduction in space for keeping looms, lack of interest among youngsters to learn the art of weaving, poor market for handloom clothes - all led to the extinction of this handloom from Surathkal.




We have an opportunity in reviving the handlooms if we have a will and already plans are afoot, as to how best we can attract youngsters again into that field.






Workshop for motivating Self-employment and entrepreneurship to youths interested in starting new enterprises was conducted at VIRAT in association with VIRAT, Rotary Club of Surathkal, Mulathva Foundation Charitable Trust, Pranava Charitable Trust along with Department of Skill Development Entrepreneurship and Livelihood, Bangalore conducted at VIRAT on **13. Nov.**.








**Dr Aravind Bhat**,
Secretary

Gallery Link: **https://sites.google.com/site/rotarysurathkalgallery/**

# Rotary Information




ಆತ್ಮೀಯ ಸದಸ್ಯರೇ!,

ಹಬ್ಬದ ಶುಭಾಶಯಗಳು!

**Rotary Foundation** ಪರವಾಗಿ, ಈ ಸಂಕಷ್ಟದ ಸಮಯದಲ್ಲಿ ನಿಮ್ಮ ಸೇವೆ ಮತ್ತು ಬೆಂಬಲಕ್ಕೆ ನಾವು ಧನ್ಯವಾದಗಳನ್ನು ತಿಳಿಸಲು ಬಯಸುತ್ತೇವೆ. ನಿಮ್ಮಂತಹವರ ಕ್ರಮದಿಂದಾಗಿಯೇ ಹತ್ತಿರದ ಮತ್ತು ವಿಶ್ವದಾದ್ಯಂತದ ಸಮುದಾಯಗಳಲ್ಲಿ ಬದಲಾವಣೆಯನ್ನು ತರುವ ಅವಕಾಶಗಳನ್ನು ನಿರಂತರವಾಗಿ ಕಂಡುಕೊಳ್ಳಲು ನಮಗೆ ಸಾಧ್ಯವಾಗಿದೆ.

ನಮಗೆ ಒದಗಿದ ಈ ಸನ್ನಿವೇಶವನ್ನು ಇತರರೊಂದಿಗೆ ಹಂಚಿಕೊಳ್ಳುವ ಮೂಲಕ ಈ ದೀಪಾವಳಿಯಲ್ಲಿ ಶುಭಾಶಯಗಳನ್ನು ದ್ವಿಗುಣಗೊಳಿಸೋಣ. ನಮ್ಮ ಸಮುದಾಯಗಳಲ್ಲಿನ ಆರೈಕೆ, ವಿನಯ ಮತ್ತು ಉದಾರತೆಯು ನಮ್ಮ ಫೌಂಡೇಶನ್‌ನಿಂದ ಸಾಧ್ಯವಾಗಿದೆ.

ದೀಪಾವಳಿಯು ಸಂತಸದ ಸಮಯ. ಕೆಟ್ಟದ್ದರ ವಿರುದ್ಧ ಒಳ್ಳೆಯದು, ಕತ್ತಲಿನ ವಿರುದ್ಧ ಬೆಳಕು, ಅಜ್ಞಾನದ ವಿರುದ್ಧ ಜ್ಞಾನ ಮತ್ತು ನಿರಾಶೆಯ ವಿರುದ್ಧ ಆಶಾವಾದವು ಜಯಸಾಧಿಸಿದ್ದನ್ನು ಇದು ಪ್ರತಿಬಿಂಬಿಸುತ್ತದೆ.

ದೀಪಾವಳಿಯು ಸಂಭ್ರಮಿಸುವ ಸಮಯ. ನಮ್ಮ ಸುತ್ತಲೂ ಸಾಂಕ್ರಾಮಿಕ ರೋಗ ವ್ಯಾಪಿಸಿರರುವ ಹಿನ್ನೆಲೆಯಲ್ಲಿ ಈ ವರ್ಷ ನಾವು ದೀಪಾವಳಿಯನ್ನು ಆಚರಿಸಬಾರದು ಎಂದು ಹಲವರು ಭಾವಿಸಿದ್ದಾರೆ. ಅದರೆ ನಾವು ಹಬ್ಬವನ್ನು ಸಂಭ್ರಮಿಸಬೇಕು. ಅದರೆ ಜವಾಬ್ದಾರಿಯಿಂದ ಆಚರಿಸಬೇಕು. ಸಾಂಕ್ರಾಮಿಕ ರೋಗದ ಕರಿನೆರಳಿನಲ್ಲಿ, ನಮ್ಮಿಂದ ಸಹಾಯ ಪಡೆದವರಿಗಿಂತ ನಮ್ಮನ್ನು ಉತ್ತಮ ಸ್ಥಿತಿಯಲ್ಲಿಟ್ಟಿರುವುದಕ್ಕಾಗಿ ಧನ್ಯವಾದಗಳನ್ನು ಹೇಳುವ ಸನ್ನಿವೇಶ ಇದದಾಗಿದೆ.

ಈ ದೀಪಾವಳಿಯಂದು ನೀವು **Rotary Foundation** ನೀಡುವ ಉಡುಗೊರೆಯು ಭಾರತದಲ್ಲಿ ನಮ್ಮ ಸಮುದಾಯವನ್ನು ರೂಪಿಸಲು ಸಹಾಯ ಮಾಡುವುದಕ್ಕಾಗಿ ನೆರವಾಗುತ್ತದೆ. ಕೋವಿಡ್-19 ಯೋಧರಿಗೆ ಹಣಕಾಸು ನೆರವು ನೀಡುವುದು ಹಾಗೂ ನಮ್ಮ ಮಕ್ಕಳು ಸುರಕ್ಷಿತವಾಗಿ ತಮ್ಮ ಶಿಕ್ಷಣವನ್ನು ಪುನಃ ಆರಂಭಿಸಲು ಬೆಂಬಲಿಸುವುದು ಸೇರಿದಂತೆ ವಿಶ್ವದಲ್ಲಿ ಉತ್ತಮ ಕೆಲಸವನ್ನು ಮಾಡಲು ರೋಟರಿಯನ್ನರಿಗೆ ಸಹಾಯ ಮಾಡಲು ಇಂದೇ ಉಡುಗೊರೆಯನ್ನು ನೀಡಿ. ನಾವು ನಮ್ಮ ಉಡುಗೊರೆಯನ್ನು ನೀಡಿದ್ದೇವೆ!

ವಿಧೇಯಪೂರ್ವಕವಾಗಿ,

ಕೆ. ಆರ್. ರವೀಂದ್ರನ್, ಟ್ರಸ್ಟೀ ಮುಖ್ಯಸ್ಥರು 2020 - 21


ಗುಲಾಂ ಎ ವಹನ್ವತಿ, ಟ್ರಸ್ಟೀ 2018-22



END POLIO NOW

On **13th January 2014** India was officially declared as **Poliofree.**

**NOW IS THE TIME FOR MORE VIGIL**



PolioPlus

Rotary International

....think....

**ಕನ್ನಡ ರಾಜ್ಯೋತ್ಸವದ ದಿನ, ಸನ್ಮಾನಿತೆ ಸ್ವರ್ಣ ಭಟ್ ಅವರ ಭಾಷಣ**

ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಸೌಹಾರ್ದತೆ ನೆಲಸಬೇಕೆಂಬ ಆಶಯ ಸರ್ಕಾರದ ಮುಖ್ಯ ಉದ್ದೇಶವಾಗಿದ್ದಲ್ಲಿ ಪ್ರಥಮ ಆದ್ಯತೆಯಾಗಿ ಸರ್ಕಾರವು ಮದ್ಯ ಸರಬರಾಜು ಮಾಡುವುದನ್ನು ಕಡ್ಡಾಯವಾಗಿ ರದ್ದುಪಡಿಸಬೇಕಾಗಿದೆ. ಇಂದು ದೇಶದಾದ್ಯಂತ ದಿನೇ ದಿನೇ ಹೆಚ್ಚುತ್ತಿರುವ ಮಹಿಳೆಯರ ಮತ್ತು ಮಕ್ಕಳ ಮೇಲಿನ ಮಾನಭಂಗ, ಅತ್ಯಾಚಾರ ಹಾಗೂ ಕೊಲೆ ಸುಲಿಗೆಯಂತಹ ಬಹುತೇಕ ಅಪರಾಧಿ ಪ್ರಕರಣಗಳು ಮದ್ಯಪಾನ ಸೇವನೆಯಿಂದಲೇ ನಡೆಯುತ್ತಿದೆ ಎಂಬುದು ಜಗಜ್ಜಾಹಿರಾಗಿದೆ.

'ಕುಡಿತದಂತಹ ಜೀವ ವಿರೋಧಿ ಲಾಬಿಯಿಂದ ಬರುವ ಕೋಟಿಗಟ್ಟಲೆ ಆರ್ಥಿಕ ಸಂಪನ್ಮೂಲವು ಜನಕಲ್ಯಾಣ ಯೋಜನೆಗಳಿಗೆ ಬಳಸದಂತೆ ಕಟ್ಟೆಚ್ಚರ ವಹಿಸುವ ಮೂಲಕ ಅಪಾರವಾದ ಮಾನವ ಸಂಪನ್ಮೂಲವನ್ನು ಅತ್ಯಂತ ಸಮರ್ಪಕವಾದ ಉದ್ದೇಶಕ್ಕಾಗಿ ವಿನಿಯೋಗಿಸಬೇಕೆಂದು' ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಬಲವಾಗಿ ಪ್ರತಿಪಾದಿಸಿದ್ದಾರೆ.

ಹಾಗಾಗಿ ನಮ್ಮ ದೇಶದ ಗುಜರಾತ, ಬಿಹಾರ, ಮಣ ಪುರ, ನಾಗಾಲ್ಯಾಂಡ್, ಲಕ್ಷದ್ವೀಪ ರಾಜ್ಯ ಸರ್ಕಾರಗಳ ದಿಟ್ಟ ನಿರ್ಧಾರಗಳಿಂದಾಗಿ ಸಂಪೂರ್ಣ ಮದ್ಯಪಾನ ನಿಷೇಧ ಜಾರಿಯಲ್ಲಿದೆ. ಇದರ ಮುಂದುವರೆದ ಭಾಗವಾಗಿ ತಮಿಳುನಾಡು ಹಾಗೂ ಆಂಧ್ರಪ್ರದೇಶಗಳಲ್ಲಿ ಮದ್ಯಪಾನ ನಿಷೇಧಗೊಳಿಸುವ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. ಆದ್ದರಿಂದ ಸಾಮಾಜಿಕ ನ್ಯಾಯದ ಸ್ಪಷ್ಟ ಸೈದ್ಧಾಂತಿಕ ಬದ್ಧತೆಯುಳ್ಳ ತಮ್ಮಂತವರು ಈಗಲಾದರೂ ಗಂಭೀರವಾಗಿ ಯೋಚಿಸಿ ಸಕಾರಾತ್ಮಕವಾದ ಮೌಲ್ಯಗಳನ್ನಾಧರಿಸಿ ರಾಜ್ಯದಲ್ಲಿ ಮದ್ಯ ನಿಷೇಧ ಪ್ರಕ್ರಿಯೆಗೆ ಮುಂದಾಗಬೇಕೆಂಬ ಆಗ್ರಹ ನಮ್ಮದಾಗಿದೆ.

ಇದರ ಭಾಗವಾಗಿಯೇ ರಾಯಚೂರು ಜಿಲ್ಲೆಯಲ್ಲಿ ಸಾವಿರಾರು ಮಹಿಳೆಯರು, ಶಾಲಾ ಕಾಲೇಜು ಮಕ್ಕಳು ಹಾಗೂ ಜನಪರ ಕಾಳಜಿಯುಳ್ಳ ಸಾಹಿತಿಗಳು ಹಾಗೂ ಬರಹಗಾರರು ಆರಂಭಿಕವಾಗಿ **2** ನೇ ಅಕ್ಟೋಬರ್ **2016,** ಗಾಂಧಿ ಜಯಂತಿಯಂದು ತಮ್ಮ ಸರ್ಕಾರದ ಗಮನ ಸೆಳೆಯುವ ಐತಿಹಾಸಿಕ ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದ್ದರು. ಸುಮಾರು **45000** ಜನ ಮಹಿಳೆಯರು ಸೇರಿದ್ದರು.

೩೦ ಜನವರಿ ಯಲ್ಲಿ ಮಹಾತ್ಮ ಗಾಂಧಿ ಹುತಾತ್ಮರಾದ ದಿನದಂದು ಅಬಕಾರಿ ಇಲಾಖೆ ಮುಂದೆ "ನಮ್ಮ ಗಾಂಧಿ ನಮಗೆ ಕೊಡಿ" ವಿನೂತನ ಚಳುವಳಿ ಆರಂಭಿಸಲಾಯಿತು. ಅಬಕಾರಿ ಇಲಾಖೆಯಲ್ಲಿ ಗಾಂಧಿ ಭಾವಚಿತ್ರ ವಿಟ್ಟು ಅಲ್ಲಿಯೇ ಮದ್ಯದ ಅಂಗಡಿಗಳನ್ನು ಪರವಾನಿಗೆ ಹಾಗೂ ಮದ್ಯದ ವ್ಯವಹಾರ ಮಾಡುವದನ್ನು ವಿರೋಧಿಸಿ ಸುಮಾರು ೧೫ ಜಿಲ್ಲೆಗಳಲ್ಲಿ ಹೋರಾಟ ಮಾಡಲಾಯಿತು.

ಸರಕಾರ ೮೦೦ ಹೊಸ ಮದ್ಯದ ಆಗಂಡಿಗಳು ತೆರೆಯಲು ಅನುಮತಿ ನೀಡಿದಾಗ, **MSIL** ಅಧ್ಯಕ್ಷರ ಮನೆಯ ಮುಂದೆ ಚಳುವಳಿ ಹಾಗೂ ರಾಯಚೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗಮನ ಸೆಳೆದು ತೆರೆಯದಂತೆ ನೋಡಿಕೊಳ್ಳಲಾಯಿತು.

ಇದಕ್ಕೆ ಪೂರಕವಾಗಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿಯೂ ಮದ್ಯ ವಿರೋಧಿ ಆಂದೋಲನಕ್ಕೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸ್ವಯಂಪ್ರೇರಣೆಯಿಂದ ಸ್ವಾಭಿಮಾನಿ ಜನಾಂದೋಲನವನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಮತ್ತೆ ದಿ.**29.10.2017** ರಂದು ಮೇಧಾ ಪಾಟ್ಕರ್ ಹಾಗೂ ತರಳುಬಾಳು ಜಗದ್ಗುರು ಸಾವಿರಾರು ಸಂಖ್ಯೆಯಲ್ಲಿ **34** ಜನಪರ ಸಂಘಟನೆಗಳು ಸೇರಿಕೊಂಡು ರಾಜ್ಯ ಸಮಾವೇಶ ನಡೆಸಿ ಸಂಪೂರ್ಣ ಮದ್ಯ ನಿಷೇಧಕ್ಕಾಗಿ ಆಗ್ರಹಿಸಿದ್ದಾರೆ.



ಬೆಳಗಾವಿಯಲ್ಲಿ ಸುವರ್ಣ ಸೌಧದಲ್ಲಿ ಅಧಿವೇಶನ ನಡೆದಾಗ ಕೂಡ ಸಾವಿರಾರು ಮಹಿಳೆಯರು ಸಂಪೂರ್ಣ ಮದ್ಯ ನಿಷೇಧಕ್ಕಾಗಿ ಆಗ್ರಹಿಸಿ ಸುವರ್ಣ ಸೌಧಕ್ಕೆ ಮಹಿಳೆಯರು ಮುತ್ತಿಗೆ ಹಾಕಿದ್ದರು.

ಎಲ್ಲಾ ಮಠಾಧೀಶರು, ಪ್ರಗತಿಪರರು, ಸಾಹಿತಿಗಳು, ಗಣ್ಯರನ್ನು ಸೇರಿಸಿ ಎಲ್ಲಾ ಜಿಲ್ಲೆಗಳಲ್ಲಿ ಸಮಾವೇಶಗಳನ್ನು ಹಮ್ಮಿಕೊಳ್ಳುವುದರ ಮೂಲಕ ಆಂದೋಲನ ಇನ್ನು ಗಟ್ಟಿ ಗೊಳಿಸುವ ಪ್ರಯತ್ನ ಮಾಡಲಾಯಿತು.

೭೧ ದಿನಗಳ ಅಹೋರಾತ್ರಿ ಸತ್ಯಾಗ್ರಹ

ಮದ್ಯ ನಿಷೇಧ ಆಂದೋಲನ ಕರ್ನಾಟಕ ಕಳೆದ ಎರಡು ವರ್ಷಗಳಿಂದ ಮಹಿಳೆಯರ ನೇತೃತ್ವದಲ್ಲಿ ಆಂದೋಲನವನ್ನು ಮುನ್ನಡೆಸಿಕೊಂಡು ಬಂದಿದೆ ಆದರೆ ಇವತ್ತಿನ ವರೆಗೂ ಎಲ್ಲಾ ಮುಖ್ಯ ರಾಜಕೀಯ ಪಕ್ಷಗಳಿಂದ ನಮ್ಮ ಬೇಡಿಕೆ ಕುರಿತು ಯಾವ ಆಶ್ವಾಸನೆ ದೊರೆತಿಲ್ಲ ಆದ್ದರಿಂದ ಮದ್ಯ ನಿಷೇಧ ಆಂದೋಲನ ರಾಜ್ಯ ಮಟ್ಟದ **71** ದಿನಗಳ ಅಹೋರಾತ್ರಿ ಸತ್ಯಾಗ್ರಹವನ್ನು ರಾಯಚೂರಿನ ( ಮಹಾತ್ಮ ಗಾಂಧಿ ಪ್ರತಿಮೆ ಕ್ರೀಡಾಂಗಣ ಆವರಣ) ದಲ್ಲಿ "ಅಂತರ ರಾಷ್ಟ್ರೀಯ ಸಾಮಾಜಿಕ ನ್ಯಾಯ" ದಿನವಾದ **2018** ಫೇಬ್ರವರಿ **20** ರಿಂದ ಮೇ **1** " ವಿಶ್ವ ಕಾರ್ಮಿಕ ದಿನಾಚರಣೆ" ವರೆಗೆ ಮಾಡಲಾಯಿತು.

ಈ ಸತ್ಯಾಹ್ರದಲ್ಲಿ ನಾವು ಜನರಿಗೆ ಸಾಮಾಜಿಕ ಹಾಗೂ ರಾಜಕೀಯ ಹಕ್ಕುಗಳ ಬಗ್ಗೆ ಅರಿವು ಮೂಡಿಸುತ್ತೇವೆ ಜೊತೆಗೆ ಕಾಂಗ್ರೇಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ನಮ್ಮ ಪ್ರಶ್ನೆ ಏನೆಂದರೆ ಸ್ವಾತಂತ್ರ್ಯ ಬಂದು **71** ವರ್ಷಗಳು ಗತಿಸಿವೆ ಆದರೆ ಪಕ್ಷಗಳು ಇನ್ನೂ ಕೂಡ ಗೌರವ ನೀಡುತ್ತಿಲ್ಲಾ ಈ ಸತ್ಯಾಗ್ರದಲ್ಲಿ ನಾವು ಪಕ್ಷಗಳಿಗೆ ಕೇಳುವುದೆನೆಂದರೆ ನಮ್ಮ ಜನಸಂಖ್ಯೆಯ ಶೇ **50** ರಷ್ಟು ಹೊಂದಿರುವ ಮಹಿಳೆಯರಿಗೆ ನೀವು ಗೌರವದ ಬಗ್ಗೆ ಸರಕಾರಕ್ಕೆ ಪ್ರಶ್ನಿಸಲಾಯಿತು.

ಮದ್ಯ ನಿಷೇಧಕ್ಕೆ ಆಗ್ರಹಿಸಿ ಮಹಿಳೆಯರು ವಿವಿಧ ರೀತಿಯ ಹೋರಾಟ ಮಾಡುತ್ತಲೇ ಇದ್ದಾರೆ.

* **2019,** ಜನವರಿ **18** ರಿಂದ **30** ರವರೆಗೆ ಚಿತ್ರದುರ್ಗ ದಿಂದ ಬೆಂಗಳೂರಿಗೆ **3,000** ಹೆಣ್ಣುಮಕ್ಕಳು ಕೈಗೊಂಡ ಪಾದಯಾತ್ರ.
* ಕೂಡಲ ಸಂಗಮದಲ್ಲಿ ಉಪವಾಸ ಹಾಗೂ ಜಲ ಸತ್ಯಾಗ್ರಹ
* ಪತ್ರಚಳುವಳಿ ಹಾಗೂ ಮನಿ ಆರ್ಡರ್ ಚಳವಳಿ
*ಗ್ರಾಮ ಸಭೆಯಲ್ಲಿ ಮದ್ಯ ನಿಷೇಧಕ್ಕಾಗಿ ಠರಾವುಗಳು ಪಾಸು ಮಾಡಿಸಿದ್ದು.

ಈಗ ಕಾನೂನು ಹೋರಾಟಕ್ಕೂ ಮುಂದಾಗಿದ್ದೇವೆ.

ಸುಮಾರು **35** ಸಂಘಟನೆಗಳನ್ನು ಒಳಗೊಂಡ ಆಂದೋಲನ ಈ ಕೆಳಗಿನ ಹಕ್ಕೊತ್ತಾಯಗಳು ಕಾರ್ಯರೂಪಕ್ಕೆ ಬರುವ ತನಕ ಅಹಿಂಸಾತ್ಮಕ ಚಳವಳಿಯನ್ನು ಪ್ರಾಮಾಣಿಕವಾಗಿ ಮುಂದುವರಿಸುತ್ತದೆ.

**1.** ಸಂವಿಧಾನದ **73**ನೇ ತಿದ್ದುಪಡಿಯ ಆಶಯದಂತೆ ಅನುಷ್ಠಾನಗೊಳಿಸುವುದು ( ಗ್ರಾಮಗಳ ಭವಿಷ್ಯವನ್ನು ನಿರ್ಧರಿಸುವ ಅಧಿಕಾರವನ್ನ ಗ್ರಾಮ ಸಭೆಗೆ ನೀಡುವುದು) ಉದಾ: ಗ್ರಾಮ ಪಂಚಾಯತಿಗಳು ಗ್ರಾಮ ಸಭೆಯ ಮೂಲಕ ಪಂಚಾಯತಿ ವ್ಯಾಪ್ತಿಯಲ್ಲಿ ಮದ್ಯದ ಅಂಗಡಿಗಳು ಇರಬಾರದೆಂದು ನಿರ್ಧಾರ ತೆಗೆದುಕೊಳ್ಳಬಹುದು. (ಕಾನೂನು ಬಾಹಿರ, ಖಾಸಗಿ ಅಥವಾ ಸರಕಾರಿ ಮಳಿಗೆಗಳಾಗಿರಬಹುದು) ಈಗಾಗಲೇ ಗ್ರಾಮಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಗ್ರಾಮ ಪಂಚಾಯತಿಗಳಲ್ಲಿ ತಕ್ಷಣ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ಹೊರಡಿಸಬೇಕು.

**2.** ರಾಜ್ಯಗಳಲ್ಲಿ ಮದ್ಯ ಸೇವನೆ ಕಡಿಮೆ ಮಾಡುವ ನಿಟ್ಟಿನಲ್ಲಿ ಭಾರತದ ಸಂವಿಧಾನದ ಅನುಚ್ಛೇದ **47** ರಲ್ಲಿ ರಾಜ್ಯಗಳಿಗೆ ನೀಡಲಾದ ನಿರ್ದೇಶನದಂತೆ "ಮದ್ಯ ಮುಕ್ತ ಕರ್ನಾಟಕ ನೀತಿಯತ್ತ" ಸಾಗುವ ಸಲುವಾಗಿ ಮೂರು ತಿಂಗಳೊಳಗೆ ಸಮಿತಿ ರಚಿಸಿ ಸರಕಾರದ ನೀತಿಯನ್ನು ಜಾರಿಗೊಳಿಸಬೇಕು. ವಾಸ್ತವದಲ್ಲಿ ಸರಕಾರಗಳು ಹೆಚ್ಚು ಹೆಚ್ಚು ಜನರನ್ನು ಕುಡುಕರನ್ನಾಗಿ ಮಾಡುತ್ತಿವೆ. ಜೊತೆಗೆ ಯುವ ಪೀಳಿಗೆಯನ್ನು ಶ್ರಮಜೀವಿಗಳನ್ನಾಗಿ ಮಾಡುವ ಬದಲು ಕುಟುಂಬಕ್ಕೆ ಮತ್ತು ಸಮಾಜಕ್ಕೆ ಹೊರೆಯಾಗುವಂತೆ ಮಾಡುತ್ತಿವೆ. ಕರ್ನಾಟಕದಲ್ಲಿ ಈಗಾಗಲೆ ಅಬಕಾರಿ ಇಲಾಖೆಗಳಿಗೆ ಸರಕಾರ ಗುರಿ ನಿಗದಿ ಪಡಿಸುವದನ್ನು ನೋಡಿದ್ದೇವೆ. ಎಂಟು ವರ್ಷದಲ್ಲಿ ಅಬಕಾರಿ ಆದಾಯ ರೂ. **9000** ಕೋಟಿಯಿಂದ ರೂ. **20,000** ಕೋಟಿಗೆ ಏರಿರುವುದೇ ಇದಕ್ಕೆ ನಿದರ್ಶನ.

**3.** ಕನಾಟಕದ ಎಲ್ಲ ಹಳ್ಳಿಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟವಾಗುತ್ತಿರುವದನ್ನು ತಕ್ಷಣವೇ ನಿಲ್ಲಿಸಬೇಕು. ಕಿರಾಣ , ಬೀಡಾ ಅಂಗಡಿ, ಹೋಟಲ್, ಮನೆಮನೆಗಳಲ್ಲಿ ಮದ್ಯ ಮಾರಾಟವಾಗುತ್ತಿದೆ. ಹಾಗಾಗಿ ಎಲ್ಲಾ ಜಾತಿಯವರನ್ನೊಳಗೊಂಡ, ಶೇ. **75** ರಷ್ಟು ಮಹಿಳೆಯರು ಇರುವ ಏಳು ಸದಸ್ಯರನ್ನು ಒಳಗೊಂಡ ಸಾಮಾಜಿಕ ನ್ಯಾಯ ಸಮಿತಿಯನ್ನು ಪ್ರತಿ ಹಳ್ಳಿಯಲ್ಲಿ ರಚಿಸಬೇಕು. ಈ ಸಮಿತಿ ಅಕ್ರಮ ಮದ್ಯ ಮಾರಾಟದ ಮೇಲೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ನೀಡಿ ಸಶಕ್ತಗೊಳಿಸಬೇಕು. ಉದಾ: ಹಳ್ಳಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿರುವ ಗ್ರಾಮ ಪಂಚಾಯತಗಳು, ಅಬಕಾರಿ ಇಲಾಖೆ ಮತ್ತು ಮಾರಾಟ ಮಾಡುತ್ತಿರುವ ಜನರ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರ ನೀಡಬೇಕು. ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಜನರಿಗೆ ಸರಕಾರಿ ಯೋಜನೆಗಳನ್ನ/ ಸೌಲಭ್ಯಗಳನ್ನು ರದ್ದುಗೊಳಿಸುವ ಹಾಗೂ ದಂಡ ವಿಧಿಸುವ ಅಧಿಕಾರ ಇತ್ಯಾದಿ. ಈ ರೀತಿಯ ಆದೇಶವನ್ನು ತಕ್ಷಣ ಜಾರಿಗೊಳಿಸಬೇಕು.

**4.** ಕುಡಿತದ ಚಟದಿಂದ ಬಲಿಯಾದ ಕುಟುಂಬಗಳಿಗೆ ಪರಿಹಾರ ನೀಡಬೇಕು.

Sent in by Rtn Prof. Krishnamoorthy



...Smile ...

